ಓ.ಎಸ್ ನಂಬರ್‌ಃ 81/2019

ಪಿಡಬ್ಲ್ಯೂಃ 1

ಇಂದು ದಿನಾಂಕಃ 09.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**<u>ಪಾಟೀ ಸವಾಲುಃ</u>** ಪ್ರತಿವಾದಿ 1, 2, 6 ರಿಂದ 8 ಪರ ಮಾನ್ಯ ಎ.ಜಿ.ಪಿ.ಯವರಿಂದಃ

1. ನಾನು ಬಿ.ಕಾಂ ಪದವಿ ಮುಗಿಸಿರುತ್ತೇನೆ. ಸಾಕ್ಷಿ ಪ್ರಮಾಣ ಪತ್ರಕ್ಕೆ ಮಾಹಿತಿ ನಾನೇ ನೀಡಿರುತ್ತೇನೆ. ಪ್ರತಿವಾದಿ 1 ರವರ ಶಾಲೆಯಲ್ಲಿ 1 ರಿಂದ 4 ನೇ ತರಗತಿ ಓದಿರುತ್ತೇನೆ. ಸದರಿ ಶಾಲೆಗೆ ನಮ್ಮ ತಂದೆ ನೀಡಿದ ಮಾಹಿತಿಯಂತೆ ನನ್ನ ಹೆಸರು, ನನ್ನ ತಂದೆಯ ಹೆಸರು ಹಾಗೂ ಮನೆ ಹೆಸರು ನಮೂದು ಆಗಿರುತ್ತದೆ ಎಂದರೆ ಸರಿ. ಆ ಪ್ರಕಾರ ನನ್ನ ಹೆಸರು ಅರುಣ ತಂದೆ ಈರಪ್ಪ ಗಾಣಿಗ, ತಾಯಿ ಹೆಸರು ಸರೋಜಮ್ಮ ಎಂದು ನಮೂದಾಗಿರುತ್ತದೆ ಎಂದರೆ ಸರಿ.

2. ಪ್ರತಿವಾದಿ ಪರ ವಕೀಲರು ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದು ಪ್ರತಿವಾದಿ 1 ರವರ ಶಾಲೆಯ ದಾಖಲಾತಿ ಎಂದು ಹೇಳಲಾಗಿ, ಸಾಕ್ಷಿಯು ಅದನ್ನು ನೋಡಿ ಒಪ್ಪಿಕೊಂಡಿದ್ದು, ಸದರಿ ದಾಖಲೆಯನ್ನು ನಿಡಿ-1 ಎಂದು ಹಾಗೂ ಸಾಕ್ಷಿಯ ಹೆಸರಿರುವ ಭಾಗವು ನಿಡಿ-1(ಎ) ಎಂದು ಗುರುತಿಸಲಾಯಿತು. 5 ಮತ್ತು 6 ನೇ ತರಗತಿಯನ್ನು ತುಮಕೂರಿನ ಸಿದ್ಧಗಂಗಾ ಮಠ ಶಾಲೆಯಲ್ಲಿ ಓದಿರುತ್ತೇನೆ. ಪ್ರತಿವಾದಿ 1 ರವರ ಶಾಲೆಯಿಂದ ವರ್ಗಾವಣೆ ಪತ್ರ ತೆಗೆದುಕೊಂಡು ಸಿದ್ಧಗಂಗಾ ಮಠದ ಶಾಲೆಗೆ ಪ್ರವೇಶ ಪಡೆದಿರುತ್ತೇನೆ ಎಂದರೆ ಸರಿ. ಸದರಿ ಶಾಲೆಯಲ್ಲೂ ಸಹ ನನ್ನ ಹೆಸರು ಅರುಣ ತಂದೆ ಈರಪ್ಪ ಗಾಣಿಗ ಎಂದು ನಮೂದಾಗಿರುತ್ತದೆ ಎಂದರೆ ಸರಿ.

3. ನಂತರ 7 ಮತ್ತು 8 ನೇ ತರಗತಿಯನ್ನು ಪ್ರತಿವಾದಿ 1 ರವರ ಶಾಲೆಯಲ್ಲಿ ಓದಿರುತ್ತೇನೆ. ನಂತರ ಪ್ರತಿವಾದಿ 2 ರವರ ಶಾಲೆಯಲ್ಲಿ 9 ಮತ್ತು 10 ನೇ ತರಗತಿ ಓದಿರುತ್ತೇನೆ. ಪಿ.ಯು.ಸಿ. ಮತ್ತು ಪದವಿಯನ್ನು ಪ್ರತಿವಾದಿ 3 ಮತ್ತು 4 ರವರ ಸಂಸ್ಥೆಯಲ್ಲಿ ಓದಿರುತ್ತೇನೆ. ಸದರಿಯವರ ಮಹಾವಿದ್ಯಾಲಯದಲ್ಲೂ ಸಹ ನನ್ನ ಮನೆತನದ ಹೆಸರು ಗಾಣಿಗ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ಸದರಿ ಮನೆತನದ ಹೆಸರು ಗಾಣಿಗ ಎಂದು ನನಗೆ ಎಸ್.ಎಸ್.ಎಲ್.ಸಿ.,ಯಲ್ಲಿ ಇರುವಾಗ ಗೊತ್ತಾಗಿರುತ್ತದೆ.

4. ಶಾಲೆಗಳಲ್ಲಿ ಹಾಜರಾತಿ ಹಾಕುವಾಗ ಮನೆತನದ ಹೆಸರು ಗಾಣಿಗ ಎಂದು ಕೂಗುತ್ತಿದ್ದರು ಎಂದರೆ ಸರಿ. ನನಗೆ ಮನೆತನದ ಹೆಸರು ಗಾಣಿಗ ಎಂದು ಗೊತ್ತಾದ ಮೇಲೆ ನಾನು ಮನೆತನದ ಹೆಸರು ಜ್ಯೋತಿಬಣ್ಣದ ಎಂದು ತಿದ್ದುಪಡಿ ಮಾಡಲು ಯಾವುದೇ ಅರ್ಜಿ ಕೊಟ್ಟಿಲ್ಲ. ಎಸ್.ಎಸ್.ಎಲ್.ಸಿ.,ಯನ್ನು 2015 ರಲ್ಲಿ ಮುಗಿಸಿರುತ್ತೇನೆ. 2015 ರಲ್ಲೇ ನೋಟೀಸ್ ಕೊಟ್ಟು ದಾವೆ ಹೂಡಲು ನನಗೆ ಯಾವುದೇ ತೊಂದರೆ ಇರಲಿಲ್ಲ.

5. ಸದರಿ ದಾವೆಯು ಕಾಲ ಪರಿಮಿತಿ ಬಾಧೆ ಹೊಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾವು ನಮ್ಮ ತಂದೆಗೆ 3 ಜನ ಮಕ್ಕಳು. ನನ್ನ ಹಿರಿಯ ಅಣ್ಣ ಪೊಲೀಸ್ ಇರುತ್ತಾರೆ. ನನ್ನ ಅಕ್ಕ ಬಿ.ಎಡ್. ಓದಿರುತ್ತಾರೆ. ನನ್ನ ಅಣ್ಣ ಹಾಗೂ ಅಕ್ಕನ ಶಾಲಾ ದಾಖಲಾತಿ ಹಾಜರುಪಡಿಸಿರುತ್ತೇನೆ. ನನ್ನ ತಂದೆ 4 ನೇ ತರಗತಿ ಓದಿರುತ್ತಾರೆ. ನನ್ನ ತಂದೆಯ ಶಾಲಾ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. 5 ಹಾಗೂ 6 ನೇ ತರಗತಿ ಓದಿರುವ ಶಾಲೆಯ ಮುಖ್ಯೋಪಾಧ್ಯಾಯರನ್ನು, ಬಿ.ಇ.ಓ. ಡಿ.ಡಿ.ಪಿ.ಐ. ಮತ್ತು ಡಿ.ಸಿ.ರವರನ್ನು ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ.

6. ಸದರಿಯವರನ್ನು ಪಕ್ಷಗಾರರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಸದರಿಯವರು ದಾವೆಯ ಅವಶ್ಯಕ ಪಕ್ಷಗಾರರಿದ್ದು, ಅವರನ್ನು ಸೇರಿಸದೇ ಇರುವುದು ಸದರಿ ದಾವೆಗೆ ಅವಶ್ಯಕ ಪಕ್ಷಗಾರರ ಬಾಧೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಸದರಿ ದಾವೆಗೆ ಅವಶ್ಯಕ ಪಕ್ಷಗಾರರು ಎಂದರೆ ನನಗೆ ಗೊತ್ತಿಲ್ಲ. ಸದರಿ ಶಾಲೆಯ ದಾಖಲೆಗಳನ್ನು ತಿದ್ದುಪಡಿ ಮಾಡುವ ಅವಶ್ಯಕತೆ ಇದೆ. ಶಾಲೆಗೆ ದಾಖಲೆ ಮಾಡುವಾಗ ನನ್ನ ತಂದೆಗೆ ನೀಡಿದ ಮಾಹಿತಿಯಂತೆ ನನ್ನ ಹೆಸರು ಮತ್ತು ನನ್ನ ಮನೆತನದ ಹೆಸರು ನಮೂದಾಗಿದ್ದು, ಸದರಿ ಪ್ರತಿವಾದಿ 1 ರಿಂದ 9 ರವರ ಯಾವುದೇ ತಪ್ಪಿಲ್ಲ ಎಂದರೆ ಸರಿ. ಪ್ರತಿವಾದಿ 1 ರಿಂದ 9 ರವರಿಗೆ ತೊಂದರೆ ಕೊಡಲು ಸದರಿ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

7. ಸದರಿ ದಾವೆಗೆ ಯಾವುದೇ ಕಾರಣ ಉಂಟಾಗಿಲ್ಲ ಹಾಗೂ ಈ ದಾವೆಗೆ ಅವಶ್ಯಕ ಪಕ್ಷಗಾರರ ಬಾಧೆ ಹಾಗೂ ಕಾಲ ಪರಿಮಿತಿ ಬಾಧೆ ಇರುವುದರಿಂದ ಸದರಿ ದಾವೆ ಕಾನೂನಿನಲ್ಲಿ ಊರ್ಜಿತವಾಗುವುದಿಲ್ಲ ಎಂದರೆ ಗೊತ್ತಿಲ್ಲ. ನನ್ನ ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ತಂದೆ ಹೆಸರನ್ನು ಈರಪ್ಪ ಗಾಣಿಗ ಎಂದು ಬರೆಸಿರುತ್ತೇನೆ ಎಂದರೆ ಸರಿ. ನಾನು ಗಾಣಿಗ ಮನೆತನಕ್ಕೆ ಸೇರಿರುವುದರಿಂದ ನನ್ನ ತಂದೆ ಹೆಸರನ್ನು ಈರಪ್ಪ ಗಾಣಿಗ ಎಂದು ಬರೆಸಿರುತ್ತೇನೆ ಆದ್ದರಿಂದ ನನ್ನ ಮನೆತನದ ಹೆಸರು ಜ್ಯೋತಿಬಣ್ಣದ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳು ಇತ್ತೀಚಿನ ದಾಖಲಾತಿಗಳು ಎಂದರೆ ಸರಿ. ನಾನು ಪ್ರತಿವಾದಿ 1 ರಿಂದ 9 ರವರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಓ.ಎಸ್ ನಂಬರ್‌ಃ 81/2019

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ<br>Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,<br>ಹಿರೇಕೆರೂರು.